# ಮಕ್ಕಳು ಹೀಗೇಕೆ?

ಎಂತಹ ಸಂದರ್ಭದಲ್ಲೂ ಎದೆಗುಂದದೆ ಮುನ್ನುಗುವ ಮಾನಸಿಕ ಸ್ಥೈರ್ಯವನ್ನು ಬಾಲ್ಯದಿಂದಲೇ ಮಕ್ಕಳಿಗೆ ಕಲಿಸಬೇಕು.

■ ಸವಿತಾ ಸಚ್ಚಿದಾನಂದ

ಎಂದಿನಂತೆ ಅಂದು ಕೆಲಸವೆಲ್ಲಾ ಮುಗಿಸಿ ದಿನಪತ್ರಿಕೆ ಓದುತ್ತಿದ್ದೆ. ಅದರಲ್ಲಿ ಒಂದು ಸುದ್ದಿ ಓದಿ ನನ್ನ ಕರುಳು ಕಿತ್ತು ಬರುವಂತಾಯಿತು. ಕೌಟುಂಬಿಕ ಕಲಹದ ಹಿನ್ನೆಲೆಯಿಂದ ಬೇಸತ್ತ ಮಹಿಳೆಯೊಬ್ಬಳು ತನ್ನ ನಾಲ್ಕು ಮತ್ತು ಆರು ವರ್ಷದ ಎರಡು ಮಕ್ಕಳಿಗೆ ವಿಷವುಣಿಸಿ ತಾನು ಆತ್ಮಹತ್ಯೆ ಮಾಡಿಕೊಂಡಿರುವ ವರದಿ ಎಂತಹ ಕಲ್ಲು ಮನಸ್ಸಿನವರಿಗೂ ಹೃದಯ ಕಲುಕುವಂತಿತ್ತು. ತಂದೆ ತಾಯಿಯರು ಮಾಡಿದ ತಪ್ಪಿಗೆ ಅಮಾಯಕ ಮಕ್ಕಳನ್ನು ಬಲಿ ಕೊಡುತ್ತಿರುವುದು ಯಾವ ನ್ಯಾಯ?. ಇತ್ತೀಚಿನ ದಿನಗಳಲ್ಲಿ ಟಿ.ವಿ ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ಎಲ್ಲಿ ನೋಡಿದರೂ ಆತ್ಮಹತ್ಯೆ ಯ ಸುದ್ದಿಗಳೇ ರಾರಾಜಿಸುತ್ತಿರುತ್ತದೆ. ಸಾಲ ಬಾಧೆ ಅಥವಾ ಬೆಳೆ ಹಾನಿಯಿಂದ ರೈತರ ಸಾವು, ಪರೀಕ್ಷೆ ಫಲಿತಾಂಶದಲ್ಲಿ ಅನುತೀರ್ಣಗೊಂಡ ವಿದ್ಯಾರ್ಥಿಗಳ ಆತ್ಮಹತ್ಯೆ.. ಹೀಗೆ ಜೀವನದ ಸಮಸ್ಯೆಗಳನ್ನು ಎದುರಿಸಲಾಗದೆ ಹೇಡಿಗಳು ಕಂಡುಕೊಂಡಿರುವ ಸುಲಭದ ದಾರಿ ಎಂದರೆ ಸಾವಿಗೆ ಶರಣಾಗುವುದು.

ಮೂವತ್ತು ನಲವತ್ತು ವರ್ಷಗಳ ಹಿಂದೆ ಅಲ್ಲೊಂದು ಇಲ್ಲೊಂದು ಇಂತಹ ಪ್ರಕರಣಗಳನ್ನು ಕೇಳುತ್ತಿದ್ದ ನಾವು ಇತ್ತೀಚಿನ ದಿನಗಳಲ್ಲಿ ಇಂತಹ ಪ್ರಕರಣಗಳು ಯಾಕೆ ಗಣನೀಯವಾಗಿ ಹೆಚ್ಚುತ್ತಿದೆ ಎಂದು ಯೋಚಿಸಿದರೆ ತಾಳ್ಮೆಯ ಕೊರತೆ ಮತ್ತು ಜನರ ಸೂಕ್ಷ್ಮ ಮನಸ್ಥಿತಿಯೇ ಕಾರಣವೆನಿಸುತ್ತದೆ. ಹಾಗಾದರೆ ಹಿಂದಿನವರಿಗೆ ಕಷ್ಟ ನಷ್ಟಗಳಾಗಲಿ, ಸಾಲದ ಹೊರೆ ಹಾಗೂ ಕೌಟುಂಬಿಕ ಸಮಸ್ಯೆಗಳಾಗಲಿ ಇರಲಿಲ್ಲವಾ? ನನ್ನ ಪ್ರಕಾರ ಹಿಂದೆ ಜನರಿಗೆ ಜೀವನದಲ್ಲಿ ಬರುವ ಸಮಸ್ಯೆಗಳನ್ನು ಎದುರಿಸುವ ಚಲ ಮತ್ತು ಆತ್ಮವಿಶ್ವಾಸವಿತ್ತು. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬಂತೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಜೀವನ ನಡೆಸುತ್ತಿದ್ದರು. ನಾಗಾಲೋಟದಲ್ಲಿ ಓಡುತ್ತಿರುವ ಈಗಿನ ಕಾಲಕ್ಕೆ ತಕ್ಕಂತೆ ಜನರ ಮನಸ್ಸುಗಳು ಓಡುತ್ತಿದೆ. ರಾತ್ರಿ ಕಳೆದು ಹಗಲಾಗುವ ಹೊತ್ತಿಗೆ ಕೋಟ್ಯಾಧಿಪತಿಗಳಾಗಬೇಕೆಂಬ ಹುಚ್ಚು ಆಸೆಯಿಂದ ಜನರು ಅಸಾಧ್ಯವಾದ ಕೆಲಸಗಳಿಗೆ ಕೈ ಹಾಕಿ ಅದು ವಿಫಲಗೊಂಡಾಗ ಜೇಡರ ಬಲೆಯೊಳಗೆ ಸಿಲುಕಿದ ಹುಳುವಿನಂತೆ ಹೊರಬರಲಾಗದೆ ಕೊನೆಗೆ ಉರುಳಿಗೆ ಕೊರಳೊಡ್ಡುತ್ತಾರೆ.

ಕೆಲವೊಮ್ಮೆ ನಾವು ಮಕ್ಕಳನ್ನು ಬೆಳೆಸುತ್ತಿರುವ ರೀತಿಯು ಇಂತಹ ಘಟನೆಗಳಿಗೆ ಕಾರಣವಾಗುತ್ತದೆ ಎಂದರೂ ಅತಿಶಯೋಕ್ತಿಯಲ್ಲ. ಹೇಗೆ ಗೌತಮ ಬುದ್ಧನಾದ ಸಿದ್ಧಾರ್ಥನನ್ನು ಅವರ ತಾಯಿ ಪ್ರಪಂಚದ ಕಷ್ಟ ಕಾರ್ಪಣ್ಯಗಳು ತನ್ನ ಮಗನಿಗೆ ತಿಳಿಯದಂತೆ ಬೆಳೆಸಿದಳೋ ಹಾಗೆ ನಾವು ಮಕ್ಕಳನ್ನು ಅತಿಯಾದ ಮುದ್ದಿನಿಂದ ನಾವು ಬಾಲ್ಯದಲ್ಲಿ ಪಟ್ಟ ಕಷ್ಟಗಳಾಗಲಿ ಹಣದ ತೊಂದರೆಯಾಗಲಿ ನಮ್ಮ ಮಕ್ಕಳಿಗೆ ಆಗಬಾರದೆಂದು ಸೂಕ್ಷ್ಮವಾಗಿ ಬೆಳೆಸುತ್ತೇವೆ. ಅಂತಹ ಮಕ್ಕಳಿಗೆ ಎಲ್ಲಾದರೂ ಸ್ವಲ್ಪ ನೋವಾದರೆ, ಅವಮಾನವಾದರೆ ಅದನ್ನು ಎದುರಿಸುವ ಧೈರ್ಯವಿಲ್ಲದೆ ಆತ್ಮಹತ್ಯೆಯಂತಹ ಕೆಲಸಗಳಿಗೆ ಕೈ ಹಾಕುತ್ತಾರೆ. ಇನ್ನು ಕೆಲವು ಪೋಷಕರು ತಮ್ಮ ಮಕ್ಕಳ ಸಾಮರ್ಥ್ಯವನ್ನು ತಿಳಿಯದೆ ನನ್ನ ಮಗ ಡಾಕ್ಟರ್ ಅಥವಾ ಇಂಜಿನಿಯರ್ ಆಗಬೇಕು ಎಂದು ಇಂತಿಷ್ಟೇ ಅಂಕ ಗಳಿಸಬೇಕೆಂದು ಒತ್ತಡ ಹೇರುತ್ತಾರೆ. ಅಂತಹ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕಡಿಮೆ ಅಂಕ ತೆಗೆದರೆ ತುಂಬ ನಿರೀಕ್ಷೆಯಲ್ಲಿರುವ ತಂದೆ ತಾಯಿಯರನ್ನು ಹೇಗೆ ಎದುರಿಸಲಿ ಎಂದು ಹೆದರಿ ಆತ್ಮಹತ್ಯೆಗೆ ಮೊರೆ ಹೋಗುತ್ತಾರೆ.

ಜೀವನ ಎಂದರೆ ಕಷ್ಟಸುಖ ನೋವು ನಲಿವು ಎಲ್ಲವೂ ಇರುತ್ತದೆ. ಹೇಗೆ ರಾತ್ರಿ ಕಳೆದ ಮೇಲೆ ಹಗಲು ಬರುತ್ತದೋ ಹಾಗೆ ನಮ್ಮ ಜೀವನ ಚಕ್ರದಲ್ಲೂ ಕೆಟ್ಟ ದಿನಗಳ ನಂತರ ದಿನಗಳು ಬಂದೆ ಬರುತ್ತದೆ. ಅಂತಹ ಸಂದರ್ಭದಲ್ಲಿ ಸ್ವಲ್ಪ ತಾಳ್ಮೆಯಿಂದ ಬದುಕನ್ನು ಎದುರಿಸಬೇಕು.



ಮಕ್ಕಳು ಮಾನಸಿಕವಾಗಿ ಸಧೃಡರಾಗಿ..

* ವ್ಯಾಪಾರವಾಗಲಿ, ವ್ಯವಸಾಯವಾಗಲಿ ಯಾವುದೇ ಕೆಲಸಕ್ಕೆ ಕೈ ಹಾಕುವ ಮೊದಲು ಅದರಲ್ಲಿ ಬರುವ ಲಾಭ ನಷ್ಟವನ್ನು ಸಮನಾಗಿ ಸ್ವೀಕರಿಸುವ ಮನಸ್ಥಿತಿಯನ್ನು ಹೊಂದಿರಬೇಕು.
* ಬಾಲ್ಯದಿಂದಲೇ ಮಕ್ಕಳಿಗೆ ಎಂತಹ ಸಂದರ್ಭದಲ್ಲೂ ಎದೆಗುಂದದೆ ಮುನ್ನುಗುವ ಮಾನಸಿಕ ಸ್ಥೈರ್ಯವನ್ನು ಕಲಿಸಬೇಕು.
* ಮಕ್ಕಳು ಸಮಸ್ಯೆಯ ಸುಳಿಯಲ್ಲಿ ಸಿಲುಕಿದಾಗ ನೆರಳಿನಂತೆ ಅವರನ್ನು ಕಾಪಾಡುವ ಬದಲು ಅವರ ಬುದ್ಧಿವಂತಿಕೆ ಪ್ರದರ್ಶಿಸಲು ಅವಕಾಶ ಕೊಡಿ. ಏಕೆಂದರೆ ಕಾಲ ಹೀಗೆ ಇರುವುದಿಲ್ಲ ಸ್ವತಂತ್ರವಾಗಿ ಬಾಳುವುದನ್ನು ಕಲಿಸಿ.
* ಪೋಷಕರು ಮಕ್ಕಳು ಎಲ್ಲದರಲ್ಲೂ ಮುಂದಿರಬೇಕೆಂದು ಒತ್ತಡ ಹೇರಬೇಡಿ. ಅದು ಸಾಧ್ಯವಾಗದಿದ್ದಾಗ ಮಕ್ಕಳು ಖಿನ್ನತೆಗೆ ಒಳಗಾಗಿ ಅನಾಹುತಕ್ಕೆ ಎಡೆಮಾಡಿ ಕೊಡುತ್ತದೆ. ■